2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 105/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸೀತಮ್ಮ | ಪಿಡಬ್ಲೂ - 5 |
| ಗಂಡನ ಹೆಸರು | - | ತಾನೋಜಿ ರಾವ್ | ಸಿಡಬ್ಲೂ - 5 |
| ವಯಸ್ಸು | - | 68 ವರ್ಷ | |
| ಉದ್ಯೋಗ | - | ಗೃಹಿಣಿ | |
| ವಾಸ ಸ್ಥಳ | - | ಬುಕ್ಕಾಂಬೂದಿ | |

ದಿನಾಂಕಃ 27.07.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಗೊತ್ತು. ಅವರು ಮೊದಲು ನಮ್ಮ ಊರಾದ ಬುಕ್ಕಾಂಬೂದಿಯಲ್ಲಿ ವಾಸವಾಗಿದ್ದರು. ನಂತರ ಅವರು ಶಿವನಿಗೆ ಹೋದರು. ಚಾಸಾ.1, ಚಾಸಾ.9 ಮತ್ತು ಚಾಸಾ.10 ರವರು ಗೊತ್ತಿಲ್ಲ. ಚಾಸಾ.2, 3, 4 ರಿಂದ ಚಾಸಾ.8 ರವರು ಗೊತ್ತು. ಅವರು ನಮ್ಮ ಊರಿನವರು. ಮೃತೆ ಲತಾ ಗೊತ್ತು. ಆಕೆ 1 ನೇ ಆರೋಪಿಯ ಹೆಂಡತಿ.

2. ಈಗ್ಗೆ 3 ವರ್ಷಗಳ ಹಿಂದೆ ಬುಕ್ಕಾಂಬೂದಿಯಲ್ಲಿರುವ 1 ನೇ ಆರೋಪಿಯ ಮನೆಯಲ್ಲಿ ಲತಾ ಮೃತಪಟ್ಟಿದ್ದಾಳೆ. ನನಗೆ ಓಡಾಡಲು ಆಗದ ಕಾರಣ ನಾನು ಆಕೆಯ ಶವವನ್ನು ನೋಡಲು ಹೋಗಿಲ್ಲ. ಆಕೆ ಹೇಗೆ, ಯಾವ ಕಾರಣಕ್ಕೆ ಯಾರಿಂದ ಮೃತಪಟ್ಟಿದ್ದಾಳೆ ಎಂದು ನನಗೆ ಗೊತ್ತಿಲ್ಲ. ಆರೋಪಿ

ಲತಾಳ ಸಾವಿಗೆ ಸಂಬಂಧಿಸಿದಂತೆ ಆರೋಪಿತರ ವಿರುದ್ಧ ದೂರು ದಾಖಲಾಗಿರುವ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರು ಲತಾಳ ಸಾವಿಗೆ ಸಂಬಂಧಿಸಿದಂತೆ ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

3. ಸಾಕ್ಷಿಯು ಈಗಾಗಲೇ ನಿಪಿ.2, 3, 4, 5, 9 ಮತ್ತು 10 ಎಂದು ಗುರುತಿಸಲಾಗಿರುವ ಫೋಟೋಗಳಲ್ಲಿ ಲತಾಳ ಮೃತ ದೇಹವಿದೆ ಎಂದು ನುಡಿದಿರುತ್ತಾರೆ. ಲತಾಳ ಸಾವಿಗೆ ಯಾರು ಕಾರಣರೆಂದು ನನಗೆ ಗೊತ್ತಿಲ್ಲ. ಆರೋಪಿತರು ಮೃತಳಿಗೆ ಏನು ತೊಂದರೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

4. ನಾನು ಸುಮಾರು 25-30 ವರ್ಷಗಳಿಂದ ಬುಕ್ಕಾಂಬೂದಿಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. 2 ನೇ ಆರೋಪಿ ಸದರಿ ಗ್ರಾಮದ ಅಂಗನವಾಡಿಯ ಟೀಚರ್ ಆಗಿ ಕೆಲಸ ಮಾಡಿಕೊಂಡು ಆಕೆಯ ಗಂಡನಾದ 3 ನೇ ಆರೋಪಿ ಮತ್ತು ಮಕ್ಕಳಾದ 1 ಮತ್ತು 4 ನೇ ಆರೋಪಿತರೊಂದಿಗೆ ಬುಕ್ಕಾಂಬೂದಿಯಲ್ಲಿ ವಾಸವಾಗಿದ್ದಳು ಎಂದರೆ ಸಾಕ್ಷಿ ಅವರು ಬುಕ್ಕಾಂಬೂದಿಯಲ್ಲಿ ವಾಸವಾಗಿದ್ದರು ಆದರೆ ಲತಾ ಮೃತಪಡುವ ಹಿಂದೆ ಆರೋಪಿತರು ಬುಕ್ಕಾಂಬೂದಿಯಿಂದ ಶಿವನಿಗೆ ಹೋಗಿ ಅಲ್ಲಿ ನೆಲೆಸಿದ್ದರು ಮತ್ತು ಅಲ್ಲಿಂದ ಬುಕ್ಕಾಂಬೂದಿಗೆ ಓಡಾಡುತ್ತಿದ್ದರು ಎನ್ನುತ್ತಾರೆ.

ಆದರೆ ಮೃತೆ ಲತಾ ಬುಕ್ಕಾಂಬೂದಿಯಲ್ಲಿರುವ ಆರೋಪಿತರ ಮನೆಯಲ್ಲಿ ವಾಸವಾಗಿದ್ದಳು ಎನ್ನುತ್ತಾರೆ. 1 ನೇ ಆರೋಪಿ ಘಟನೆಯ 4-5 ತಿಂಗಳ ಹಿಂದೆ ಲತಾಳನ್ನು ಮದುವೆ ಮಾಡಿಕೊಂಡು ಬಂದಿದ್ದನು ಮತ್ತು ಆ ವಿಚಾರವನ್ನು ಯಾರಿಗೂ ಹೇಳಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿ ಲತಾಳನ್ನು ಮದುವೆ ಮಾಡಿಕೊಂಡು ಬಂದು 2 ಮತ್ತು 3 ನೇ ಆರೋಪಿತರು ವಾಸವಾಗಿದ್ದ ಮನೆಯಲ್ಲಿಯೇ ವಾಸವಾಗಿದ್ದರು ಎಂದರೆ ಸರಿಯಲ್ಲ. ಮದುವೆ ಮಾಡಿಕೊಂಡು ಬಂದ 1 ತಿಂಗಳ ಬಳಿಕ 2 ಮತ್ತು 3 ನೇ ಆರೋಪಿತರು ಲತಾಳೊಂದಿಗೆ ಜಗಳ ಮಾಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಗಳದ ಬಗ್ಗೆ ಲತಾ ಮತ್ತು 2 ನೇ ಆರೋಪಿಗೆ ಮನಸ್ತಾಪವಾಗಿ 2 ಮತ್ತು 3 ನೇ ಆರೋಪಿತರು ಮನೆಯನ್ನು ಖಾಲಿ ಮಾಡಿಕೊಂಡು ಘಟನೆಯ 2 ತಿಂಗಳ ಹಿಂದೆ ಶಿವನಿಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಲತಾ ಮತ್ತು 2 ನೇ ಆರೋಪಿ ಗಲಾಟೆ ಮಾಡಿಕೊಂಡು ಜಗಳವಾಗಿದ್ದ ಬಗ್ಗೆ ಲತಾಳ ಮೇಲೆ 2 ನೇ ಆರೋಪಿ ಅಜ್ಜಂಪುರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಆ ರೀತಿ 2 ಮತ್ತು 3 ನೇ ಆರೋಪಿತರು ಮನೆಯನ್ನು ಖಾಲಿ ಮಾಡಿಕೊಂಡು ಹೋದ ನಂತರ 1 ನೇ ಆರೋಪಿ ಮತ್ತು ಮೃತೆ ಲತಾ ಇಬ್ಬರೇ ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿ ಕೋರಿಯರ್ ಕಂಪೆನಿಗೆ ಚಾಲಕನಾಗಿ

ಹೋಗುತ್ತಿದ್ದನು ಮತ್ತು ಆಗಾಗ್ಗೆ ಲತಾಳ ಮನೆಗೆ ಬಂದು ಹೋಗುತ್ತಿದ್ದನು ಎಂದರೆ ಸರಿ. ದಿನಾಂಕ 20.04.2019 ರಂದು ಶನಿವಾರ ಬೆಳಿಗ್ಗೆ 9.00 ಗಂಟೆ ಸುಮಾರಿಗೆ ಲತಾಳ ಮನೆಯು ಮುಂದೆ ಜನ ಸೇರಿದ್ದನ್ನು ನೋಡಿ ನಾನು ವಿಚಾರಿಸಲಾಗಿ ಲತಾಳು ಅವರ ಮನೆಯ ಮಲಗುವ ಕೋಣೆಯ ಮೇಲ್ಛಾವಣಿಗೆ ಹಾಕಿದ್ದ ಅಡಿಕೆ ಮರದ ಬೊಂಬಿಗೆ ನೇಣು ಹಾಕಿಕೊಂಡು ಆತ್ಮಹತ್ಯೆಮಾಡಿಕೊಂಡಿದ್ದಾಗಿ ತಿಳಿಯಿತು ಎಂದರೆ ಸಾಕ್ಷಿ ಜನ ಸೇರಿದ್ದು ಮತ್ತು ಪೊಲೀಸರು ಬಂದಿದ್ದರು ಆದರೆ ನನಗೆ ಉಳಿದ ವಿಚಾರ ಗೊತ್ತಿಲ್ಲ ಎನ್ನುತ್ತಾರೆ. ಈ ವಿಚಾರಗಳನ್ನು ಮತ್ತು ಲತಾ ಮತ್ತು 1 ನೇ ಆರೋಪಿಯ ಮಧ್ಯೆ ಏನೋ ಗಲಾಟೆಯಾಗಿ ಅಥವಾ ಆಕೆಯ ಅತ್ತೆ ಮಾವ ಮತ್ತು ಆಕೆಯ ನಡುವೆ ಆಗಿದ್ದ ಮನಸ್ತಾಪದಿಂದ ಅವರ ಹಿಂಸೆಯನ್ನು ತಾಳಲಾರದೇ ಲತಾ ನೇಣು ಹಾಕಿಕೊಂಡಿರಬಹುದು ಅಥವಾ 1 ನೇ ಆರೋಪಿ ರಾತ್ರಿ ಲತಾಳೊಂದಿಗೆ ಗಲಾಟೆ ಮಾಡಿಕೊಂಡು ಅವರಿಬ್ಬರ ನಡುವೆ ಏನೋ ಅಚಾತುರ್ಯ ಆಗಿರಬಹುದೆಂದು ತಿಳಿಸಿ ದಿನಾಂಕ 21.04.2019 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ.32 ಎಂದು ಗುರುತಿಸಲಾಯಿತು.

5. ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ನೀವು ಪೊಲೀಸರಿಗೆ ನಿಪಿ.32 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಈಗ ಆರೋಪಿತರು ನಿಮ್ಮ ಊರಿನವರಾಗಿರುವ ಕಾರಣ ಅವರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು

ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಬಿ ಎಂ ಎಲ್ ಜಿ ಆರೋಪಿತರ ಪರ ವಕೀಲರಿಂದಃ

6. ನಿಪಿ.2 ರಿಂದ 5 ಮತ್ತು 9 ಮತ್ತು 10 ಫೋಟೋಗಳಲ್ಲಿರುವ ಮೃತ ದೇಹ ಲತಾಳದ್ದು ಎಂದು ಗುರುತಿಸಿ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

ಮರು ವಿಚಾರಣೆ ಇಲ್ಲಃ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.